ಡಿ .ಡಬ್ಲ್ಯೂ: 01.

ದಿನಾಂಕಃ 19-11-2018 ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿಪರ ಶ್ರೀ ಸಿ ಎಸ್ ಎಸ್ ವಕೀಲರಿಂದಃ

ನಾನು ಹಾಜರುಪಡಿಸಿರುವ ದಾಖಲೆಗಳು ನಿಡಿ-**1** ರಿಂದ **3** ಕಂಪಲಾಪುರ ಗ್ರಾಮದ ಸ.ನಂಃ **90** ಕ್ಕೆ ಸಂಬಂಧಪಟ್ಟಿದ್ದವು ಎಂದರೆ ಸರಿ . ದಾವಾ ನಡೆಯುತ್ತಿರುವ ಜಮೀನು ಎಂ ಆರ್ ಕಾವಲು ಸ,ನಂಃ **24/1** ರಿಂದ **24/4** ಕ್ಕೆ ಸಂಬಂಧಪಟ್ಟಿದೆ ಎಂದರೆ ಸರಿ . ನಿಡಿ**1** ರಿಂದ ನಿಡಿ-**3** ನ್ನು ಯಾವ ಉದ್ದೇಶಕ್ಕಾಗಿ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿಯು ನಾನು ಮತ್ತು ವಾದಿ ಅಣ್ಣತಮ್ಮಂದಿರು ಎಂದು ತೋರಿಸಲು ಸದರಿ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. **1973** ರಲ್ಲಿ ಭಾಗ ಆಗಿರುವ ಬಗ್ಗೆ ನಕಲು ಪ್ರತಿ ಇದ್ದು , ಅದನ್ನು ಹಾಜರುಪಡಿಸಿರುವುದಿಲ್ಲ. ಸ.ನಂಃ **24/1** ರಿಂದ **24/4** ರ ಜಮೀನು ಕೇಶವಯ್ಯ ಬಿನ್ ಪುಟ್ಟಯ್ಯ ಎನ್ನುವವರಿಗೆ ಕ್ರಯ ಆಗಿದ್ದು , ಸದರಿ ಕ್ರಯಪತ್ರದಲ್ಲಿ ಸನಂಬರು ತಪ್ಪು ನಮೂದು ಆಗಿರುವ ಬಗ್ಗೆ ನನಗೆ ಗೊತ್ತಿಲ್ಲಾ. ಎ ಸಿ ನ್ಯಾಯಾಲಯದಲ್ಲಿ ಆರ್ ಆರ್ ಟಿ **556/2007-08** ರಲ್ಲಿ ಪ್ರಕರಣ ನಡೆದು ದಿಃ**24-01-2008** ರಂದು ಆದೇಶವಾಗಿರುವ ಬಗ್ಗೆ ನನಗೆ ಗೊತ್ತಿಲ್ಲಾ.

ಕೇಶವಯ್ಯ ಬಿನ್ ಪುಟ್ಟಯ್ಯರವರು ತಾವು ಕ್ರಯಕ್ಕೆ ಪಡೆದ ಜಮೀನನ್ನು ತಮ್ಮ ಮಗಳಾದ ಕಾವೇರಿಗೆ ದಾನಪತ್ರ ಮೂಲಕ ಕೊಟ್ಟಿದ್ದು ಸುಳ್ಳು . ಸದರಿ ದಾನ ಪತ್ರದಲ್ಲಿ ಅವರು ಸ್ವಾಧೀನದಲ್ಲಿರುವದು ಸ.ನಂಃ **31/3** ಮತ್ತು **34/1** ಎಂದು ತಿಳಿದು ಬಂದಿತ್ತು ಎಂದರೆ ಸರಿ . ಆ ರೀತಿ ತಿಳಿದು ಬಂದಿದ್ದರಿಂದ ದಿಃ**24-01-2008** ರಂದು ಎ ಸಿ ನ್ಯಾಯಾಲಯದಲ್ಲಿ ಆದೇಶ ಆಗಿ ಸ.ನಂಃ**31/3** ವಿಸ್ತೀರ್ಣ **1** ಎಕರೆ **38** ಗುಂಟೆ , ಸ.ನಂಃ **34/1** ವಿಸ್ತೀರ್ಣ **1** ಎಕರೆ **38** ಗುಂಟೆ ಜಾಗವನ್ನು ಕಾವೇರಿ ಹೆಸರಿರುವವರಿಗೆ ಖಾತೆ ಮಾಡಬೇಕಾಗಿ ಆದೇಶ ಆದ ಬಗ್ಗೆ ನನಗೆ ಗೊತ್ತಿಲ್ಲಾ.

ಅದೇ ರೀತಿ ಖಾತೆ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲಾ. ಸಣ್ಣೇನಹಳ್ಳಿಗೌಡರ ಮಗ ಕೆಂಪೇಗೌಡ ಎಂದರೆ ಮೃತ ಮೂಲ ವಾದಿಯ ತಂದೆ ಎಂದರೆ ಸರಿ . ದಿಃ**24-01-2008** ರಂದು ಎ ಸಿ ನ್ಯಾಯಾಲಯದಲ್ಲಿ ಕೆಂಪೇಗೌಡ ಬಿನ ಸಣ್ಣೇನಳ್ಳಿಗೌಡರಿಗೆ ಸ.ನಂಃ**24/1** ರಿಂದ **24/4** ರವರೆಗಿನ ಖಾತೆಗಳನ್ನು ಮಾಡಬೇಕೆಂದು ಆದೇಶ ಆಗಿರುವ ಬಗ್ಗೆ ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಆಗಿರಬಹುದು ಆದರೆ ನನಗೆ ಗೊತ್ತಿಲ್ಲಾ. ಸಾಕ್ಷಿ ಪುನಃ ನುಡಿಯುತ್ತಾ ಆಗಿದೆ ಎಂದಿದ್ದಾರೆ.

ನನ್ನ ತಂದೆ ಸ.ನಂಃ**24/1** ರಿಂದ **24/4** ರವರೆಗಿನ ಜಮೀನಿನ ಖಾತೆಗಳನ್ನು ನನ್ನ ತಂದೆ ಹೆಸರಿಗೆ ಬದಲಾವಣೆ ಆಗುವ ಕಾಲಕ್ಕೆ ಕೆಂಪೇಗೌಡ ಬಿನ್ ಸಣ್ಣೇನಹಳ್ಳಿಗೌಡ ಹೆಸರಿಗೆ ಇತ್ತು ಎಂದರೆ ಸರಿ ಸ.ನಂಃ**24/1** ರಿಂದ **24/4** ರ ಜಮೀನಿನ ಖಾತೆಯನ್ನು ನನ್ನ ತಂದೆ ಹೆಸರಿಗೆ ಬದಲಾವಣೆ ಆಗುವ ಮುಂಚೆ ವಾದಿಯ ತಂದೆಗಾಗಲೇ, ಅಥವಾ ಕೆಂಪೇಗೌಡರಿಗಾಗಲೀ ನೋಟೀಸು ಕೊಟ್ಟಿಲ್ಲ. ಕಂದಾಯ ಇಲಾಖೆಗೆ **1973** ರಲ್ಲಿ ಆದಂತಹ ಪಾಲು ಪರಿಕತ್ ನ್ನು ನೀಡಿ ಖಾತೆ ಮಾಡಿಸಿಕೊಂಡಿರುತ್ತೇವೆ. ಖಾತೆ ಬದಲಾವಣೆಯನ್ನು **1973** ರಲ್ಲಿ ಆದಂತಹ ಪಾಲು ಪರಿಕತ್ ನಂತೆ ಖಾತೆ ಮಾಡಿದ್ದಾರೆಂದು ನಮೂದು ಮಾಡಿಲ್ಲ. ಎಂ ಆರ್ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ನಮ್ಮ ವಕೀಲರಿಗೆ ನೀಡಿದ್ದೇವೆ ಎಂದಿದ್ದಾರೆ. ಕಾನೂನಿನ ಪ್ರಕಾರ ನಿಮ್ಮ ತಂದೆಯ ಹೆಸರಿಗೆ ಖಾತೆ ಬದಲಾವಣೆ ಆಗಿರಲಿಲ್ಲಾ ಮತ್ತು ಆ ರೀತಿ ಖಾತೆ ಬದಲಾವಣೆ ಮಾಡಲು ಅವಕಾಶ ಇರಲಿಲ್ಲಾ ಎಂದರೆ ಸರಿಯಲ್ಲಾ. ಕಂದಾಯ ಅಧಿಕಾರಿಗಳೊಂದಿಗೆ ಶಾಮೀಲಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲಾ. ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ , ನಮ್ಮ ಹೆಸರಿನಲ್ಲಿ **2009-10** ರ ನಂತರದಲ್ಲಿ ನಮ್ಮ ಹೆಸರು ಬರುತ್ತದೆ ಎಂದರೆ ಸರಿ . ಅದರ ಪೂರ್ವದಲ್ಲಿ ಮೂಲ ವಾದಿಯ ಹೆಸರಿನಲ್ಲಿ ಖಾತೆ ಇದ್ದವು ಎಂದರೆ ಸರಿ . **1973** ರಿಂದ **2009** ರವರೆಗೆ ಕೆಲವಂದಿಷ್ಟು ಜಮೀನನ್ನು ನಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿಕೊಂಡಿದ್ದೇವೆ. ಕೆಲವಂದಿಷ್ಟು ಜಂಟಿ

ಖಾತೆಯಲ್ಲಿತ್ತು. ಸ.ನಂಃ **90** ಕ್ಕೆ ಸಂಬಂಧಪಟ್ಟಂತೆ ದಾಖಲೆ ಕೊಟ್ಟಿರುತ್ತೇನೆ. ನಮಗೂ ಮತ್ತು ಮೃತ ವಾದಿಗೂ ಜಂಟಿ ಖಾತೆ ಇರುವ ಯಾವುದೇ ಜಮೀನಿನ ಖಾತೆ ಕೊಟ್ಟಿರುವುದಿಲ್ಲ. ಈಗಲೂ ಸಹ ಕೆಲವಂದಿಷ್ಟು ಜಂಟಿ ಖಾತೆಯಲ್ಲಿ ಇವೆ. ಸ.ನಂಃ**50/3, 90** ಪಿರಿಯಾಪಟ್ಟಣದಲ್ಲಿರುವ ಆಸ್ತಿಗಳು ಈಗಲೂ ಸಹ ಜಂಟಿ ಖಾತೆಯಲ್ಲಿವೆ. ದಾಖಲೆಗಳನ್ನು ಕೊಟ್ಟಿರುವುದಿಲ್ಲ. ನಮ್ಮ ಮತ್ತು ಅವರ ಕುಟುಂಬನ ಬೇರೆ ವಾದಿಯೇ ಆ ಜಮೀನಿನಲ್ಲಿ ಸ್ವಾಧೀನದಲ್ಲಿ ಇದ್ದಾರೆಂದರೆ ಸರಿಯಲ್ಲಾ. ಅವರ ಬೆನ್ನಿನ ಹಿಂದೆ ಕಂದಾಯ ಇಲಾಖೆಯೊಂದಿಗೆ ಶಾಮೀಲಾಗಿದ್ದರಿಂದ ಅವರ ಸ್ವಾದಿನಕ್ಕಾಗಿ ತೊಂದರೆ ಕೊಟ್ಟಿದ್ದೀರಿ ಎಂದರೆ ಸರಿಯಲ್ಲಾ. ಆ ಕಾರಣಕ್ಕಾಗಿ ದಾವೆ ಹೂಡಿದ್ದೀರಿ ಎಂದರೆ ಸರಿಯಲ್ಲಾ. ಮೃತ ಕುಟುಂಬದವರೆ ಸ್ವಾದೀನದಲ್ಲಿದ್ದಾರೆಂದರೆ ಸರಿಯಲ್ಲಾ. ಅಕ್ರಮ ಫಾಯಿದೆ ಹೊಂದಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲಾ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಹುಣಸೂರು.